ಶ್ರೀ ರಾಜಾ ಅಮರೇಶ್ವರ್ ನಾಯಕ್ :- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಒಟ್ಟು 415 ತೋಟಗಾರಿಕಾ ಕ್ಷೇತ್ರಗಳು ಇವೆ. ಅದರಲ್ಲಿ ಸಸ್ಯಾಗಾರಗಳ ಸಂಖ್ಯೆ 247 ಕ್ಷೇತ್ರಗಳು. ಒಟ್ಟು ವಿಸ್ತೀರ್ಣ ಸುಮಾರು 17,350 ಎಕರೆಗಳಷ್ಟು ಇದೆ. ಈ ತೋಟಗಾರಿಕಾ ಕ್ಷೇತ್ರಗಳಿಂದ ರೈತರಿಗೆ ಬೇಕಾದ ಸಸಿಗಳು ಇನ್ನಿತರ ಪರಿಕರಗಳನ್ನು ಕೊಡತಕ್ಕಂತಹ ಕಾರ್ಯಕ್ರಮ ಹಾಕಿಕೊಂಡಿದೆ. ತಾವು ತಿಳಿಸಿರುವಂತೆ ಸಾಕಷ್ಟು ಅನುದಾನ ಕೊಡಬೇಕಾಗುತ್ತದೆ. ಕೆಲವೊಂದು ವಿಚಾರಗಳನ್ನು ಮಾನ್ಯ ಸಭಾಪತಿಯವರು ವ್ಯಕ್ತಪಡಿಸಿದ್ದಾರೆ. ವಿಷಯ ಸಮಿತಿಯಿಂದ ಬಂದಂತಹ ವರದಿ ಮತ್ತು ಮಾನ್ಯ ಸದಸ್ಯರು ತಿಳಿಸಿದ ಅಂಶಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಈಗಿರತಕ್ಕಂತಹ ತೋಟಗಾರಿಕಾ ಫಾರಂನಲ್ಲಿ ತೆಂಗಿನ ಮರ, ಬಾಳೆ ಎಲೆ ಎಲ್ಲಾ ಇದೆ. ಅಲ್ಲಿ ಬರತಕ್ಕಂತಹ ಉತ್ಪನ್ನ ಏನಿದೆ ಅದನ್ನು ಅಲ್ಲಿರತಕ್ಕಂತಹ ಸಿಬ್ಬಂದಿಯವರು ಖಾಸಗಿಯವರಿಗೆ ಮಾರಾಟ ಮಾಡಿ ತಿನ್ನುತ್ತಿದ್ದಾರೆ. ಆದರೂ ಆ ಸಿಬ್ಬಂದಿ ಮೇಲೆ ತೋಟಗಾರಿಕಾ ಇಲಾಖೆ ಅಧಿಕಾರಿಗಳ ಸೂಪರ್‌ವಿಷನ್ ಇಲ್ಲ. ಆದ್ದರಿಂದ ಪ್ರತಿ ವರ್ಷ ಬಿಡುಗಡೆ ಆಗತಕ್ಕಂತಹ ಹಣದ ಬಗ್ಗೆ ಕೂಲಂಕುಷವಾಗಿ ತನಿಖೆ ಆಗಬೇಕು. ಪ್ರತ್ಯೇಕವಾಗಿ ನನ್ನ ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಮೂರು ವರ್ಷಗಳಲ್ಲಿ ಏನು ಹಣವನ್ನು ವ್ಯಯ ಮಾಡಿದ್ದಾರೆ ಅದರ ಸಂಪೂರ್ಣ ತನಿಖೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ.

ಶ್ರೀ ರಾಜಾ ಅಮರೇಶ್ವರ್ ನಾಯಕ್ : ಸದಸ್ಯರು ತಿಳಿಸಿದ ವಿಚಾರವನ್ನು ಪರಿಶೀಲನೆ ಮಾಡಿ ಸೂಕ್ತ ತನಿಖೆಯ ಕ್ರಮ ತೆಗೆದುಕೊಳ್ಳುತ್ತೇನೆ.

ಅಥಣಿ ತಾಲ್ಲೂಕಿನ ಅಗ್ರಾಣಿ ದೊಡ್ಡಹಳ್ಳಕ್ಕೆ ನಾಲಾ ಬಂಧಾರಾ ನಿರ್ಮಾಣ

136 (1776) - ಶ್ರೀ ಡೊಂಗರಗಾಂವ ಶಹಜಹಾನ್ ಇನ್ಮಾಯಿಲ್ (ಅಥಣಿ) : ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಮಹಾರಾಷ್ಟ್ರ ಗಡಿ ಭಾಗದ ಜನರು ತಮ್ಮ ಮೂಲಭೂತ ಸೌಲಭ್ಯಕ್ಕಾಗಿ ಆಗ್ರಹಿಸಿ ಚಳುವಳಿ ಕೈಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಚಿಕ್ಕ ನೀರಾವರಿ ಇಲಾಖೆಯಿಂದ ಈ ವಿಭಾಗದಲ್ಲಿ ಹರಿಯುತ್ತಿರುವ ಅಗ್ರಾಣ ದೊಡ್ಡ ಹಳ್ಳಕ್ಕೆ ಪ್ರತಿ ಗ್ರಾಮದಲ್ಲಿ ನಾಲಾ ಬಂಧಾರಾ ನಿರ್ಮಾಣ ಮಾಡುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು

ಇ) ಮುಂದೆ ಈ ಭಾಗದಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುವುದು.

ಶ್ರೀ ಎಸ್. ಕುಮಾರ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

ಅ) ಬಂದಿದೆ

ಅ) ಅಥಣಿ ತಾಲ್ಲೂಕಿನ ಅಗ್ರಾಣ ದೊಡ್ಡ ಹಳ್ಳಕ್ಕೆ ಈ ಇಲಾಖೆಯಿಂದ ನಿರ್ಮಿಸಿರುವ ಹಾಗೂ ನಿರ್ಮಿಸಲು ಉದ್ದೇಶಿಸಿರುವ ಕಾಮಗಾರಿಗಳ ವಿವರ ಕೆಳಗಿನಂತಿದೆ.

ಕ್ರ.ಸಂ.	ಕಾಮಗಾರಿಯ ಸಂ.	ಷರಾ
1.	ಅಜೂರ ಹತ್ತಿರ ಬಂಧಾರಾ	ಕಾಮಗಾರಿಗಳು
2.	ಕಲ್ಲಟ್ಟಿ ಹತ್ತಿರ ಬಂಧಾರ	ಪೂರ್ಣಗೊಂಡಿದೆ.
3.	ಅಟ್ಟಿಹಾಳ ಹತ್ತಿರ ಬಂಧಾರ	
	2001-02ನೇ ಸಾಲಿನ ಆಯವ್ಯಯದಲ್ಲಿ ಮಂಜೂರಾದ ಕಾಮಗಾರಿಗಳು	
1)	ಶಿರೂರ ಸಂಬರಗಿ ಹತ್ತಿರ ಬಂಧಾರ	ಪ್ರಗತಿಯಲ್ಲಿದೆ.
2)	ಶಿವನೂರ ಹತ್ತಿರ ಬಂಧಾರ	ಈ ಎರಡು ಕಾಮಗಾರಿಗಳಿಗೆ ಶೇ.30 ಅನುದಾನವಿದ್ದುದರಿಂದ ಮರು
3)	ನಾಗನೂರ ಹತ್ತಿರ ಬಂಧಾರಾ	ಹೊಂದಾಣಿ ಮಾಡಲು ಕ್ರಮವನ್ನು ಕೈಗೊಳ್ಳಲಾಗಿದೆ.

ಇ) 2002-03 ರಲ್ಲಿ ಅನುದಾನ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಶ್ರೀ ಡೊಂಗರರಾವ್ ಶಹಜಹಾನ್ ಇಸ್ಮಾಯಿಲ್ : ಮಾನ್ಯ ಅಧ್ಯಕ್ಷರೇ, ಉತ್ತರಗಳನ್ನು ಒದಗಿಸಿದ್ದಾರೆ. ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ಅಗ್ರಾಣಿ ದೊಡ್ಡಹಳ್ಳ 18 ಗ್ರಾಮಗಳ ಮುಖಾಂತರ ಹರಿದು ಹೋಗಿ ಆ ಭಾಗದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗಿರುವುದು ಇದೆ. ಉತ್ತರದಲ್ಲಿ ಈ ಭಾಗದಲ್ಲಿ ಕೇವಲ ಮೂರು ಭಾಗಗಳಲ್ಲಿ ಮಾತ್ರ ನಾಲಾಬಂಧಾರು ನಿರ್ಮಾಣ ಮಾಡಿರುವುದಾಗಿ ತಿಳಿಸಿದ್ದಾರೆ. 2001-02ನೇ ಸಾಲಿನಲ್ಲಿ ಈ ಭಾಗದಲ್ಲಿ ಶಿವನೂರು ನಾಗನೂರು ಮತ್ತು ಶಿರೂರು ಗ್ರಾಮಗಳಲ್ಲಿ ಹೊಸ ನಾಲಾಬಂಧಾರಾ ಕಾರ್ಯಕ್ರಮ ತೆಗೆದುಕೊಳ್ಳುವುದು ಇದೆ.ಶಿರೂರು ಗ್ರಾಮದಲ್ಲಿರುವ ನಾಲಾ ಬಂಧಾರಾ ಪ್ರಾರಂಭವಾಗಿ ಸ್ಥಗಿತವಾಗಿದೆ. ನಾಗನೂರು ಮತ್ತು ಶಿವನೂರು ಗ್ರಾಮಗಳಿಗೆ ನಾಲಾಬಂದರು ಇನ್ನೂ ಪ್ರಾರಂಭವಾಗಿಲ್ಲ. ಏಕೆ ಪ್ರಾರಂಭವಾಗಿಲ್ಲ, ವಿಳಂಬಕ್ಕೆ ಕಾರಣವೇನೆಂದು ನನ್ನ ಮೊದಲನೇ ಪ್ರಶ್ನೆ. ಇನ್ನು 12 ಗ್ರಾಮಗಳು ಈ ಅಗ್ರಾಣ ನದಿಯ ದಡದಲ್ಲಿ ಬರುತ್ತವೆ. ಈ ಎಲ್ಲಾ ಗ್ರಾಮಗಳಿಗೆ ನಾಲಾಬಂದರು ನಿರ್ಮಾಣಮಾಡಿ ಕುಡಿಯುವ ನೀರಿನ ಸಮಸ್ಯೆ ಹಾಗೂ ರೈತಾಪಿ ಜನರಿಗೆ ಅನುಕೂಲ ಮಾಡಿಕೊಡುವ ಅವಶ್ಯಕತೆ ಇದೆ. ಅದರ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತದೆ ಎಂದು ಮಾನ್ಯ ಸಚಿವರು ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಈ ಅಗ್ರಾಣಿ ದೊಡ್ಡ ಹಳ್ಳದ ಬಗ್ಗೆ ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದು ಒಂದು ಹಂತದಲ್ಲಿ ಸುಮಾರು 18

ಬ್ಯಾರೇಜ್‌ಗಳನ್ನು ಅಲ್ಲಲ್ಲಿ ಮಧ್ಯೆಮಧ್ಯೆ ಮಾಡತಕ್ಕಂತಹ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಅದರಲ್ಲಿ ಈಗಾಗಲೇ ಮೂರು ಕಾಮಗಾರಿಗಳನ್ನು ಮುಗಿಸಿದ್ದೇವೆ. ಮೂರನ್ನು ಮಂಜೂರಾತಿ ಮಾಡಿ ಆಗಿದೆ. ಒಂದನ್ನು ನಾವು ಏನು ನಿಲ್ಲಿಸಿದ್ದೇವೆ. ಅದರ ಕೆಲಸ ತತ್‌ಕ್ಷಣವನ್ನು ಪ್ರಾರಂಭ ಮಾಡುವುದಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಎರಡನೆಯದಾಗಿ, ಇದಕ್ಕೆ ಬೇಕಾದ ಅನುದಾನವನ್ನು ಸಂಪೂರ್ಣವಾಗಿ ಮೂರನೇ ಒಂದು ಭಾಗದಷ್ಟು ಇಟ್ಟುಕೊಂಡಿದ್ದೇವೆ. ತತ್‌ಕ್ಷಣ ಟೆಂಡರ್ ಕರೆಯುವ ಪ್ರಕ್ರಿಯೆ ಮಾಡುತ್ತೇವೆ. ಈಗಾಗಲೇ ಸನ್ಮಾನ್ಯ ಬರಗೂರು ರಾಮಚಂದ್ರಪ್ಪನವರು ಗಡಿ ಪ್ರದೇಶದ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಸಂಪೂರ್ಣವಾಗಿ ಗಮನಹರಿಸುತ್ತೇವೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ ಆ ಭಾಗಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಇರಬಹುದು ಅಥವಾ ಸಣ್ಣ ನೀರಾವರಿ ಇಲಾಖೆಯಿಂದ ಆಗತಕ್ಕಂತಹ ನೀರಿನ ವ್ಯವಸ್ಥೆ ಇರಬಹುದು, ನೀರಾವರಿ ವ್ಯವಸ್ಥೆ ಇರಬಹುದು, ತತ್‌ಕ್ಷಣ ಅದಕ್ಕೆ ಗಮನಹರಿಸತಕ್ಕಂತಹ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆಂಬ ಮಾತನ್ನು ಮಾನ್ಯ ಶಾಸಕರ ಗಮನಕ್ಕೆ ತರುತ್ತೇನೆ.

ಶ್ರೀ ಡೊಂಗರರಾವ್ ಶಹಜಹಾನ್ ಇಸ್ಮಾಯಿಲ್ :- ಈ ಅಗ್ರಾಣಿ ದೊಡ್ಡಹಳ್ಳ ಇಳಿಮುಖವಾಗಿ ಹರಿದು ರಭಸದಿಂದ ಹೋಗಿ ಕೃಷ್ಣ ನದಿ ಸೇರುತ್ತದೆ. ಮಳೆಗಾಲದ ನಂತರ ಈ ನದಿಯಲ್ಲಿ ಒಂದು ಹನಿ ನೀರೂ ನಿಲ್ಲುವುದಿಲ್ಲ. ಈಗ ಎಲ್ಲಾ ಕಡೆ ನೀರಿಗೆ ಹಾಹಾಕಾರ ಇದೆ.

1.00 ಪಿಎಂ

ಮಳೆಗಾಲ ಮುಗಿದ ತಕ್ಷಣ ಕುಡಿಯುವ ನೀರಿಗಾಗಲೆ, ರೈತಾಪಿ ಜನರಿಗಾಗಲೆ ಅಥವಾ ಬೆಳೆಗಾಗಲೆ ನೀರಿರುವುದಿಲ್ಲ. ಇಂತಹ ಚಿಕ್ಕ ನದಿಗಳು ನಮ್ಮ ರಾಜ್ಯದಲ್ಲಿ ಇರುವಂತಾದ್ದು ಅಥವಾ ನಮ್ಮ ರಾಜ್ಯದಲ್ಲಿ ಹರಿದು ಹೋಗಿರುವಂತಹ ನದಿಗಳಿಗೆ ನಾವು ನಾಲಾ ಬಂದರು ಮುಖಾಂತರ ನೀರು ಸಂಗ್ರಹಣೆ ಮಾಡಿ ಅಂತರ್ಜಲ ಜಾಸ್ತಿ ಮಾಡಿ ಕುಡಿಯುವ ನೀರಿನ ಮುಖಾಂತರ ನೀರು ಸಂಗ್ರಹಣೆ ಮಾಡಿ ಅಂತರ್ಜಲ ಜಾಸ್ತಿ ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಬಹುದು. ಅಷ್ಟೇ ಅಲ್ಲ ರೈತಾಪಿ ಜನರಿಗೂ ಸಹ ಇದರಿಂದ ಲಾಭವಾಗುತ್ತದೆ. ನಾವು ಪ್ರತಿವರ್ಷ ಕುಡಿಯುವ ನೀರಿನ ಸಲುವಾಗಿ ಬೋರ್ ಅಥವಾ ತೆರೆದ ಬಾವಿಗೆ ಲಕ್ಷಾನುಗಟ್ಟಲೆ ಹಣ ಖರ್ಚು ಮಾಡುತ್ತಿದ್ದೇವೆ. ಇವೆಲ್ಲಾ ವಿಫಲವಾಗಿ ಹೋಗುತ್ತಿವೆ. ಆದ್ದರಿಂದ ಅಂತರ್ಜಲವನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಈ ಒಂದು ಅಗ್ರಾಣಿ ದೊಡ್ಡಹಳ್ಳದ ದಡದಲ್ಲಿ ಇರತಕ್ಕಂಥ ಪ್ರತಿಯೊಂದು ಗ್ರಾಮಕ್ಕೆ ಹಾಗೂ ಇನ್ನು ಇಳಿದಿರುವಂತಹ 12 ಗ್ರಾಮಗಳಿಗೂ ಮುಂದಿನ 2002 ಅಥವಾ 2003ನೇ ಸಾಲಿನ ಆಯವ್ಯಯದಲ್ಲಿ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಮಾನ್ಯ ಸಚಿವರು ಈ ಕಾರ್ಯಕ್ರಮಗಳನ್ನು ಮುಂದಿನ ವರ್ಷವೇ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ :- ಮಾನ್ಯ ಅಧ್ಯಕ್ಷರೇ, ನಾವು ಹಣಕಾಸಿನ ಲಭ್ಯತೆ ಮೇಲೆ ಈಗಾಗಲೇ ಏನು ಕಾರ್ಯಕ್ರಮ ಶುರು ಮಾಡಿದ್ದೇವೆ, ಅದನ್ನು ಮುಗಿಸುತ್ತೇವೆ. ಇನ್ನು ಮುಂದಿನ ಕಾರ್ಯಕ್ರಮಗಳನ್ನು ಹಣಕಾಸಿನ ಲಭ್ಯತೆ ಮೇಲೆ ರೂಪಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.